‘ಹಾಗಾದರೆ ನನ್ನನ್ನು ಮದುವೆಯಾಗಿಯೇ ಪ್ರೀತಿಸಲು ಶುರು ಮಾಡಿ..’ ಅವಳ ಮಾತು ಏಕೋ ನನಗೆ ಅಧಿಕ ಪ್ರಸಂಗಿತನ ಎನಿಸಿತು. ಆದರೆ ಬಾಯಿಬಿಟ್ಟು ನುಡಿಯಲಿಲ್ಲ.

‘ಹೇಮಾ.. ಮದುವೆಯೂ ಅಷ್ಟೇ.. ನಾವು ಒಬ್ಬರಿಗೊಬ್ಬರು ಪ್ರೀತಿಸಬಲ್ಲೆವು ಎಂಬ ಆತ್ಮವಿಶ್ವಾಸದಿಂದ ಒಬ್ಬರನ್ನೊಬ್ಬರು ಒಪ್ಪಿಕೊಂಡು ಮದುವೆ ಆಗುವುದು.. ಇಲ್ಲದೇ ಹೋದರೆ ಮದುವೆಯೂ ಬಲವಂತದ ಮಾಘ ಸ್ನಾನವಾಗುತ್ತದೆ..’

‘ನೀವು ಏನು ಹೇಳಿದರೆಂದು ತಿಳಿಯಲಿಲ್ಲ.. ನನ್ನ ತಂದೆ ತಾಯಿ ಇರುವ ಒಬ್ಬಳೇ ಮಗಳೆಂದು ನೀನು ಇಷ್ಟಪಟ್ಟವರನ್ನು ಮದುವೆಯಾಗು ಎಂದು ಹೇಳಿದ್ದಾರೆ.. ಅವರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆಂದು ನೀವು ಯೋಚಿಸಿದ್ದರೆ ಅದರ ಬಗ್ಗೆ ಚಿಂತಿಸಬೇಡಿ.. ನನ್ನ ತಾಯಿ ಕುಟುಂಬವನ್ನು ನಡೆಸುತ್ತಾರೆ.. ನಾನು ಕೆಲಸಕ್ಕೆ ಹೋಗುವ ಅವಶ್ಯಕತೆಯೂ ಇಲ್ಲ. ನಿಮ್ಮ ಹೆಂಡತಿಯಾಗಿ ಸದಾ ನಿಮ್ಮೊಂದಿಗೆ ಇರಬೇಕೆನ್ನುವ ಹಂಬಲವನ್ನು ಬಿಟ್ಟು ಬೇರೆ ಯಾವ ಉದ್ದೇಶಗಳೂ ನನಗಿಲ್ಲ.. ದಯವಿಟ್ಟು ನನ್ನ ಕೈಬಿಡಬೇಡಿ..’ ಅವಳು ತಲೆತಗ್ಗಿಸಿಕೊಂಡು ನುಡಿದಳು. ಕಣ್ಣುಗಳಿಂದ ಹರಿದ ನೀರು ಅವಳ ಮಡಿಲಿನಲ್ಲಿ ಹನಿ ಹನಿಯಾಗಿ ಬೀಳತೊಡಗಿದವು.

‘ಹೇಮಾ ಒಬ್ಬರಿಗೊಬ್ಬರು ಇಷ್ಟಪಟ್ಟರೆ ಹೆಂಡತಿಯ ಸಮಸ್ಯೆಗಳು ಗಂಡನದೂ ಆಗುತ್ತವೆ.. ಗಂಡನ ಸಮಸ್ಯೆಗಳು ಹೆಂಡತಿಯದೂ ಆಗುತ್ತವೆ. ಇಬ್ಬರೂ ಒಟ್ಟಿಗೆ ಸೇರಿ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ. ಆದರೆ ಈಗ ನನ್ನ ಎದುರಿಗಿರುವ ಪ್ರಶ್ನೆ ಅದಲ್ಲ. ಸಾಂಸಾರಿಕ ಬದುಕು ಎಲ್ಲಕ್ಕಿಂತ ಬಹಳ ದೊಡ್ಡದು. ಬಲವಂತವಾಗಿ ಯಾರನ್ನೋ ಮನಸ್ಸಿನೊಳಗೆ ತೂರಿಸಿಕೊಂಡು ಬದುಕಲಾಗುವುದಿಲ್ಲ. ಅದರಿಂದ ತೊಂದರೆಗಳೇ ಹೆಚ್ಚು..’ ತುಸು ಕಠಿಣವಾಗಿಯೇ ನುಡಿದೆ.

‘ಇದು ನಿಮ್ಮ ಕೊನೆಯ ನಿರ್ಧಾರವೇ.?’ ತಲೆ ಎತ್ತಿ ನನ್ನತ್ತ ನೋಡಿ ಕೇಳಿದಳು. ಅವಳ ಕಣ್ಣುಗಳು ಹೊಳಪನ್ನು ಕಳೆದುಕೊಂಡಿದ್ದವು.

‘ಹೌದು ಇದು ನನ್ನ ಕೊನೆಯ ನಿರ್ಧಾರ.. ಅದು ಎಂದೆಂದಿಗೂ ಬದಲಾಗುವುದಿಲ್ಲ..’ ಖಡಾಖಂಡಿತವಾಗಿ ಹೇಳಿದೆ.

‘ಸರಿ.. ನಾನು ನಿಮ್ಮನ್ನು ಬಲವಂತ ಮಾಡಲಾರೆ.. ನೀವು ಎಲ್ಲೇ ಇದ್ದರೂ ಹೇಗೆ ಇದ್ದರೂ ಸುಖವಾಗಿರಬೇಕು.. ನಾನು ದೇವರಲ್ಲಿ ಪ್ರಾರ್ಥಿಸುವುದು ಅಷ್ಟೇ.. ನಾನು ಮಾತ್ರ ನಿಮ್ಮ ಜಾಗದಲ್ಲಿ ಯಾರನ್ನೂ ಕಲ್ಪಿಸಿಕೊಳ್ಳಲಾರೆ.. ಎಂದೆಂದಿಗೂ ನೀವೇ ನನ್ನ ಸಂಗಾತಿ..’ ಅವಳ ಕಣ್ಣುಗಳಿಂದ ಕಣ್ಣೀರು ಧಾರೆಯಾಗಿ ಹರಿಯತೊಡಗಿತು. ಅವಳು ಒರೆಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ನಾನೂ ಅವಳನ್ನು ಓಲೈಸುವ ಗೋಜಿಗೆ ಹೋಗಲಿಲ್ಲ. ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿ ಕುಳಿತಿದ್ದೆವು.

‘ಹೊರಡೋಣವಾ..?’ ಎಲ್ಲ ಮುಗಿಯಿತು ಎಂಬ ನಿರಾಳಭಾವದಿಂದ ಮೆಲ್ಲಗೆ ಕೇಳಿದೆ. ಹೂಂಗುಟ್ಟಿದಳು. ಅವಳ ನಿಸ್ತೇಜವಾದ ಮುಖವನ್ನು ನೋಡುವ ಧೈರ್ಯವಿಲ್ಲದೆ ರಸ್ತೆಯನ್ನೇ ನೋಡುತ್ತಾ ಕಾರು ನಡೆಸತೊಡಗಿದೆ. ಅವಳು ದಾರಿಯುದ್ದಕ್ಕೂ ಅಳುತಿದ್ದಳು. ಅವಳನ್ನು ಸಿಟಿ ಬಸ್ಸು ನಿಲ್ದಾಣಕ್ಕೆ ತಲುಪಿಸಿ ನಾನು ನನ್ನ ದಾರಿಯಲ್ಲಿ ಹೊರಟೆ.

ಈ ಹೇಮಾವತಿ ಎಂಬ ಹುಡುಗಿಯ ಬಾಲಿಶ ಪ್ರೀತಿಯ ನೆನಪಿನಿಂದ ಹೊರ ಬರಲು ನನಗೂ ಸಾಕಷ್ಟು ದಿನಗಳು ಬೇಕಾದವು. ಅವಳು ಮತ್ತೆ ನನಗೆ ಯಾವುದೇ ಗಂಭೀರವಾದ ತೊಂದರೆಗಳನ್ನು ನೀಡಲಿಲ್ಲ. ಆದರೂ ನಮ್ಮ ಕೊನೆಯ ಭೇಟಿಯ ನಂತರ ಸುಮಾರು ದಿನಗಳ ಕಾಲ ಅವಳಿಂದ ನನ್ನ ಅಧಿಕೃತ ಮೊಬೈಲಿಗೆ ಹೇಗಿದ್ದೀರಾ.. ನಿಮ್ಮ ಮದುವೆಗೆ ನನ್ನನ್ನು ಕರೆಯುವುದು ಮರೆಯಬೇಡಿ.. ನೀವು ಸುಖವಾಗಿರಬೇಕು.. ನಾನಂತೂ ಜೀವನಪೂರ್ತಿ ಕನ್ಯೆಯಾಗಿಯೇ ಉಳಿಯುತ್ತೇನೆ.. ನನ್ನ ಹೃದಯದಲ್ಲಿ ನೀವು ಶಾಶ್ವತವಾಗಿದ್ದೀರಿ.. ನಾನು ನಮ್ಮಿಬ್ಬರ ವಿಷಯವನ್ನು ಯಾರ ಬಳಿಯಲ್ಲಿಯೂ ಹೇಳಿಕೊಂಡಿಲ್ಲ ಚಿಂತಿಸಬೇಡಿ.. ಎಂಬ ಮೆಸೇಜುಗಳ ಜೊತೆಜೊತೆಗೆ ನೀ ನಡೆವ ಹಾದಿಯಲ್ಲಿ ನಗೆ ಹೂವು ಬಾಡದಿರಲಿ.. ಆಡಿಸಿದಾತ ಬೇಸರ ಮೂಡಿ ಆಟ ಮುಗಿಸಿದಾ.. ಕಂಬನಿಧಾರೆ ಹರಿಸಲು ನನ್ನ ಜೀವ ಉಳಿಸಿದ.. ಎಂಬಂತಹ ಹಳೆಯ ಕನ್ನಡ ಚಲನಚಿತ್ರಗೀತೆಗಳ ಸಾಲುಗಳನ್ನೊಳಗೊಂಡ ಮೆಸೇಜುಗಳು ನಿರಂತರವಾಗಿ ಬಂದವು.

ಆದರೆ ನಾನು ಗಟ್ಟಿ ಮನಸ್ಸು ಮಾಡಿಕೊಂಡೆ. ಅವಳ ಮೆಸೇಜುಗಳಿಗೆ ವಿಚಲಿತನಾಗಲಿಲ್ಲ, ಧೃತಿಗೆಡಲಿಲ್ಲ, ಸ್ಪಂದಿಸಲೂ ಇಲ್ಲ. ನಾನು ಹೆಚ್ಚು ಹೆಚ್ಚಾಗಿ ನನ್ನ ವೃತ್ತಿಯಲ್ಲಿ ನನ್ನನ್ನು ತೊಡಗಿಸಿಕೊಂಡು ವೃತ್ತಿವ್ಯಸನಿಯಾದೆ. ನನ್ನ ಮದುವೆಯ ನಿರ್ಧಾರವನ್ನು ಮುಂದಕ್ಕೆ ಹಾಕಿ ವೃತ್ತಿಜೀವನದಲ್ಲಿ ಯಶಸ್ಸಿನ ಮೆಟ್ಟಿಲುಗಳನ್ನು ಹತ್ತಿದೆ. ಕ್ರಮೇಣವಾಗಿ ಹೇಮಾವತಿಯಿಂದ ಬರುತ್ತಿದ್ದ ಮೆಸೇಜುಗಳೂ ವಿರಳವಾಗಿ ಕೊನೆಗೆ ನಿಂತೇ ಹೋದವು. ಹೇಮಾವತಿಯ ನೆನಪು ಸಂಪೂರ್ಣವಾಗಿ ನನ್ನ ಮನಸ್ಸಿನ ಭಿತ್ತಿಯಿಂದ ಅಳಿಸಿಹೋದ ಮೇಲೆ ನಾನು ಶರಧಿಯನ್ನು ಮದುವೆಯಾದೆ.

* * *

## ವಾಸ್ತವಕ್ಕೆ ಬಂದ ಸುನಿಲ್

ನಾನು ಕಣ್ಣುಬಿಟ್ಟಾಗ ಶರಧಿ ನನ್ನ ಪಕ್ಕದಲ್ಲಿ ಮೌನವಹಿಸಿ ಕುಳಿತಿದ್ದಳು. ಟೀ ತುಂಬಿದ ಪಿಂಗಾಣಿ ಲೋಟವು ಟೀಪಾಯಿಯ ಮೇಲೆ ಕುಳಿತಿತ್ತು. ನಾನು ಕಣ್ಣುಬಿಟ್ಟದ್ದನ್ನು ಗಮನಿಸಿ ಶರಧಿ ಎದ್ದು ನಿಂತವಳೇ,

‘ರೀ ನಾನೇನಾದರೂ ತಪ್ಪು ಮಾಡಿದೆನಾ..?’ ಎಂದು ದುಗುಡ ತುಂಬಿದ ದನಿಯಲ್ಲಿ ಕೇಳಿದಳು. ನನ್ನಲ್ಲಿ ಅವಳ ಬಗ್ಗೆ ಇನ್ನಿಲ್ಲದ ಮಮಕಾರವೊಂದು ಉದಯವಾಯಿತು. ತಕ್ಷಣವೇ ನಾನೂ ಎದ್ದು ಅವಳನ್ನು ಅಪ್ಪಿ ನನ್ನ ಎದೆಗೆ ಆನಿಸಿಕೊಂಡೆ.

‘ಶರೂ.. ನಿನ್ನಿಂದ ಏನೂ ತಪ್ಪಾಗಿಲ್ಲ.. ತಲೆ ಸ್ವಲ್ಪ ನೋಯುತ್ತಿದೆ ಅಷ್ಟೇ.. ಎಂದು ಆರ್ದ್ರತೆ ತುಂಬಿದ ದನಿಯಲ್ಲಿ ನುಡಿದೆ. ಡಾಕ್ಟರ್ ಶಾಪಿಗೆ ಹೋಗೋಣ ನಡಿಯಿರಿ..’ ಎಂದು ಅಲವತ್ತುಕೊಂಡಳು.

‘ಅಂತಾದ್ದೇನೂ ಆಗಿಲ್ಲ.. ಒಂದಷ್ಟು ಹೊತ್ತು ಹೋದರೆ ಸರಿಯಾಗುತ್ತದೆ..’ ಎಂದು ಅವಳನ್ನು ಸಮಾಧಾನಿಸಿದೆ.

ನಾನು ನನ್ನ ಹೆಂಡತಿಯನ್ನು ಮನಸ್ಸಿನ ತುಂಬಾ ತುಂಬಿಕೊಂಡಿದ್ದೇನೆ. ಅವಳನ್ನು ಅತಿಯಾಗಿ ಪ್ರೀತಿಸುತ್ತೇನೆ. ಅವಳೂ ನನ್ನನ್ನು ಅಷ್ಟೇ ಗಾಢವಾಗಿ ಪ್ರೀತಿಸುತ್ತಾಳೆ. ನಾನು ಸುಖಿಯಾಗಿದ್ದೇನೆ. ಆದರೆ ಈ ಗಿರಿಧರ ಎನ್ನುವ ಆಗಂತುಕನೊಬ್ಬನ ಆಗಮನದಿಂದಾಗಿ ಧುತ್ತನೇ ಎದುರಾಗಿರುವ ಹೇಮಾವತಿಯ ನೆನಪು ನನ್ನನ್ನು ಯಾಕೋ ಏನೋ ಭೀತಿಗೊಳಿಸುತ್ತಿದೆ.

ರಾತ್ರಿ ಹಾಸಿಗೆಯಲ್ಲಿ ಮಲಗಿ ಕಣ್ಣುಮುಚ್ಚಿದರೂ ನಿದ್ರೆ ಹತ್ತಿರವೂ ಸುಳಿಯಲಿಲ್ಲ. ನನ್ನ ಎದೆಗೊರಗಿ ನಿದ್ರಿಸುತ್ತಿದ್ದ ಶರಧಿಗೆ ನಿದ್ರಾಭಂಗವಾದೀತೆಂದು ಅತ್ತಿತ್ತ ಹೊರಳಾಡದೆ ನಿಶ್ಚಲನಾಗಿ ಮಲಗಿದ್ದೆ. ಮನಸ್ಸಿನಲ್ಲಿ ನೂರೆಂಟು ಆಲೋಚನೆಗಳು ಕ್ಷಣ ಕ್ಷಣಕ್ಕೂ ಸಾಗರದ ಅಲೆಗಳಂತೆ ನುಗ್ಗಿ ಬರುತ್ತಿದ್ದವು. ಈ ಗಿರಿಧರ ಎನ್ನುವ ಆಗಂತುಕ ನನ್ನನ್ನು ಹುಡುಕಿಕೊಂಡು ಬಂದಿರುವುದರಲ್ಲಿ ಏನೋ ಒಂದು ಕೃತ್ರಿಮ ಉದ್ದೇಶ ಅಡಗಿದೆ.. ಮಳವಳ್ಳಿ ಎಂಬ ಹೇಮಾವತಿಯ ಊರನ್ನು ಅವನು ಉದ್ದೇಶಪೂರ್ವಕವಾಗಿಯೇ ತಿಳಿಸಿರಬೇಕು.. ಅವನು ಅವಳ ಸಂಬಂಧಿಕನೋ ಮತ್ತೇನೋ ಆಗಿರಬಹುದು.. ನಾಲ್ಕು ವರ್ಷಗಳ ಹಿಂದೆ ತನಗಾದ ಭಗ್ನ ಪ್ರೇಮದಿಂದ ಮನನೊಂದು ಹೇಮಾವತಿ ಈಗ ನನ್ನ ಮೇಲೆ ಸೇಡು ತೀರಿಸಿಕೊಳ್ಳಲು ಆಲೋಚಿಸಿ ಈ ಗಿರಿಧರನನ್ನು ನನ್ನ ಕಾರ್ಖಾನೆಯ ಅಧಿಕೃತ ಮೊಬೈಲ್ ನಂಬರನ್ನು ನೀಡಿ ನನ್ನ ಬೆನ್ನು ಹತ್ತುವಂತೆ ಕಳುಹಿಸಿರಬೇಕು.

ನನ್ನ ನಿವಾಸದ ವಿಳಾಸವಾದರೂ ಈ ಆಸಾಮಿಗೆ ತಿಳಿದದ್ದಾದರೂ ಹೇಗೆ..? ಎಂದೋ ಒಂದು ದಿನ ಕಾರ್ಖಾನೆಯಿಂದ ಹೊರಟ ನನ್ನನ್ನು ನನ್ನ ಮನೆಯವರೆಗೆ ಹಿಂಬಾಲಿಸಿರಬಹುದು.. ಶರಧಿ ನೀಡಿದ ವಿವರಗಳಿಂದ ಈ




### ಮಾತು

ನಿನ್ನ ಮೌನಕ್ಕಿಂತ
ಹೆಚ್ಚು ಸದ್ದು ಮಾಡಿ
ಮಾತನಾಡುತ್ತಲಿದೆ
ನಿನ್ನ ಕಾಲಿನ ಗೆಜ್ಜೆ

★ ಶ್ರೀನಿವಾಸ ಕುಂಡಂತಾಯ